ತಿರುಮಲ ತಿರುಪತಿ ದೇವಸ್ಥಾನಗಳು

# ಬಾಲ ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಆಗಸ್ಟ್ 2020

**ಸಪ್ತಗಿರಿ ಅನುಬಂಧ**

**ಶ್ರೀ ವಾಮನ ಜಯಂತಿ**
**29-08-2020**






ಬ್ರಹ್ಮೋತ್ಸವದಲ್ಲಿ ಅನ್ನಮಯ್ಯ ವೇಷದಾರಿ





ಬ್ರಹ್ಮೋತ್ಸವಗಳಲ್ಲಿ ಬಾಲಕಿಯರಿಂದ ನಾಟ್ಯ ವಿನ್ಯಾಸ

ತಿರುಮಲೆ ತಿರುಪತಿ ದೇವಸ್ಥಾನಗಳು

# ಬಾಲ ಸಪ್ತಗಿರಿ

ಸಪ್ತಗಿರಿ ಅನುಬಂಧ




ಸಂಪುಟ -01 ಆಗಸ್ಟ್ - 2020 ಸಂಚಿಕೆ -06


## ವಿಷಯ ಸೂಚಿಕೆ


| | | ಪುಟ |
|---|---|---|
| ಹಿಂದೂ ದೇವರು | ಕೃಷ್ಣ ಲೀಲೆ<br>-ಶ್ರೀಮತಿ. ಎ. ಪಾರ್ವತಿ | 04 |
| ಹನ್ನೆರಡು ಆಳ್ವಾರರು | ಕುಲಶೇಖರಾಳ್ವಾರ್<br>- ಶ್ರೀಮತಿ. ಸಿ.ಎಸ್. ಊರ್ಮಿಳಾ | 06 |
| ಕನ್ನಡ ಹರಿದಾಸವರೇಣ್ಯರು | ಕನಕದಾಸರು<br>- ಶ್ರೀಮತಿ. ಸುಧಾಮಧುಸೂದನ್ | 08 |
| ಚಿತ್ರಕಥೆ | ಕುಮಾರಧಾರಾ ತೀರ್ಥ<br>ಕಥೆ - ಶ್ರೀನಿವಾಸ ದೀಕ್ಷಿತರು<br>ಚಿತ್ರಗಳು - ಕೆ. ತುಳಸಿಪ್ರಸಾದ್ | 10 |
| ಬಾಲನೀತಿ | ದೇವರಿದ್ದಾನೆ<br>- ಬಿ. ಆರ್. ಶ್ರೀಕಂಠಯ್ಯ | 14 |
| ಪ್ರಜ್ಞಾವಂತ ಬಾಲಕಿ - | ಎ. ಛಾರ್ಮಿತ ಸಿಂಹಾ | 16 |
| ಕ್ವಿಜ್ | -ಶ್ರೀಮತಿ. ಸೂರ್ಯವಂಶಿ | 17 |
| ಚಿತ್ರಲೇಖನ | | 18 |


ಮುಖಚಿತ್ರ - ವಾಮನ ಭಗವಂತ

ಹಿಂಬದಿಚಿತ್ರ - ಬಾಲಕೃಷ್ಣ

# ಕೃಷ್ಣಲೀಲೆ

- ಶ್ರೀಮತಿ. ಎ. ಪಾರ್ವತಿ



ಕಾಳಿಂಗನ ಮೆಟ್ಟಿದ್ದು, ದನಗಾವುದು, ಕೊಳಲುದುವುದು, ಇವು ಕೃಷ್ಣ ಲೀಲೆಗಳಲ್ಲಿ ಅತಿ ಪ್ರಸಿದ್ಧವಾದವು. ಇವುಗಳ ವೈಭವನ್ನು ದಾಸರುಗಳು ಬಹಳ ಹೃದಯಂಗಮವಾಗಿ ವರ್ಣಿಸಿದ್ದಾರೆ.

ಕಾಳಿಂಗನ ಮೆಟ್ಟಿ ನಾಟ್ಯವಾಡಿದ ಕಂಜನಾಭ ಕೃಷ್ಣನು
ಯೋಗಿಗಳೆಲ್ಲ ಜಯ ಜಯ ಜಯವನ್ನೇ ಭೋಗಿಗಳೆಲ್ಲ ಭಯ ಭಯ
ವನ್ನೇ ನಾಗಕನ್ಯೆಯರು ಅಭಯ ಅಭೆಯವ್ನೇ ನಾಗಶಯನ ಸಿರಿ
ಕೃಷ್ಣ ಜನನಿಯಕಂಡು ಬೇಗನೆ ಬಿಗಿದಪ್ಪಿ ಮುದ್ದನು ತೋರುತ

**ವ್ಯಾಸರಾಯರು**

ಆಡಿದನೆ ರಂಗ ಅದ್ಭುತದಿಂದಲಿ ಕಾಳಿಂಗನ ಫಣಿಯಲಿ
ಪಾಡಿದವರಿಗೆ ಬೇಡಿದವರಗಳ ನೀಡುತಲಿ ದಯ
ಮಾಡುತಲಿ ನಲಿದಾಡುತಲಿ ಬೆಣ್ಣೆ ಬೇಡುತಲಿ ಕೃಷ್ಣ
ಅಂಬುರಹೋದ್ಭವ ಅಖಿಲಸುರರು ಕೂಡಿ ಅಂಬರದಲಿನಿಂತು

ಅವರ ಸ್ತುತಿಸೆ ರಂಭೆ ಊರ್ವಸಿ ರಮಣಿಯರೆಲ್ಲರು ಚೆಂದದಿಂದ ಭರತನಾಟ್ಯ ನಟನೆ ಝುಂತಟ ತಕಧಿಮಿ ತಧಿಗಿಣಿ ತೋಂ ಎಂದು ಝುಂಪೆತಾಳದಿ ತುಂಬುರನೊಪ್ಪಿಸಿ ಧಾಮ ಪಪಾ ಧಸರೀ ಎಂದು ಧ್ವನಿಯಿಂದ ನಾರದ ತುಂಬುರುರ್ಗಾನಮಾಡಲು ನಂದಿಯು ಮದ್ದಲೆ ಚಂದದಿ ಹಾಕಲು ಫಣವಮೆಟ್ಟಿ ಬಾಲವ ಕೈಯಲಿಪಿಡಿದು ಛಳಛಳಿಸುತ್ತ ನಾಟ್ಯವನಾಡೆ ಚಂದ್ರ ಮಂಡಲದಂತೆ ಪೊಳೆಯುವ ಮುಖದೊಳು ಚಲಿಸುವ ನೀಲ ಕೇಶಗಳಾಡೆ ಕಾಲಂದು ಗೆಜ್ಜೆ ಘಲುಘಲು ಘಲಿರೆನುತ

ಉಡಿಗೆಜ್ಜೆ ಗಂಟೆಗಳಾಡೆ ದುಷ್ಟಕಾಳಿಂಗನ ಮೆಟ್ಟ ಭರದಿಂದ ಪುಟ್ಟಪಾದವ ಇಟ್ಟು ಕೃಷ್ಣನು ಮೆಟ್ಟಿದನು ತಕಧಿಮಿ ತದಿಕೆನುತ.

ಈ ಪದ್ಯದಲ್ಲಿ ಕೃಷ್ಣ ಪರಬ್ರಹ್ಮನೆಂಬುದನ್ನು ಪುರಂದರದಾಸರು ಚೆನ್ನಾಗಿ ತೋರಿಸಿದ್ದಾರೆ. ಭಗವಂತನ ಒಂದು ವ್ಯಾಪಾರಕ್ಕೆ ಇಡೀ ಜಗತ್ತೆಲ್ಲಾ. ದೇವವೃಂದವೆಲ್ಲ ಹೇಗೆ ಮಾರ್ದನಿಕೊಡುವುದು ಅಂತೆಯೇ ಕೃಷ್ಣನು ಪರಬ್ರಹ್ಮನು, ಅಖಿಲ ಲೋಕಾಧೀಶನು ಎಂದು ಅವರು ಸೂಚಿಸಿದ್ದಾರೆ. ದಾಸರುಗಳು ಎಷ್ಟೇ ಸರಸ ಶೃಂಗಾರವನ್ನು ವರ್ಣನೆ ಮಾಡಿದರೂ ಅವನು ಪರಬ್ರಹ್ಮ, ಗೋಪಿಯರು ಅವನ ಭಕ್ತರು, ಕಾಮೋಪಾಸನೆಯಿಂದ ಭಗವಂತನನ್ನು ಹೊಂದುವ ಸಲುವಾಗಿಯೇ ಹೆಣ್ಣು ಜನ್ಮ ಹೊತ್ತ ತಪಸ್ವಿಗಳು, ಎಂಬುದನ್ನು ದಾಸರು ತೋರಿಸದೇ ಇಲ್ಲ. ಈ ಪ್ರಣಯದಲ್ಲೂ ಒಂದು ಅಲೌಕಿಕವ್ಯಾಪಾರವು ಪ್ರಕಟವಾಗಿದೆ. ಕೃಷ್ಣನು ಉಪನಯನ ಸಂಸ್ಕಾರವಾಗುವ ಮೊದಲೇ ಅಂದರೆ ಐದಾರು ವಯಸ್ಸಿನಲ್ಲೆ ತರುಣನಂತೆ ಅವರೊಂದಿಗೆ ಬೆರೆತಂತೆ ತೋರಿ ಅವರಿಗೆ ಪ್ರಣಯ ಸೌಖ್ಯ ಕೊಟ್ಟದು ಅತ್ಯಂತ ವಿಚಿತ್ರದ ಸಂಗತಿ. ಗೋಪಿಯರ ಮಾತಿನಲ್ಲಿ, ಮತ್ತು ಯಶೋದೆಯ ಮಾತಿನಲ್ಲಿ ಅಲೌಕಿಕವಾಗಿ ಬಾಲಕೃಷ್ಣ ಪ್ರಣಯಲೀಲೆಗೈದುದರ ಪ್ರಸ್ತಾಪ ಬಂದಿದೆ. ಗೋಪಿಯರಿಗೆ ಈ ಪ್ರಣಯದಿಂದ ವ್ಯಭಿಚಾರಾದಿದೋಷಗಳು ಕೂಡುವುದಿಲ್ಲವೆಂಬುದು ಇದರಿಂದಲೇ ವ್ಯಕ್ತಪಡುವುದು. ಕೃಷ್ಣನು ದನಗಾವ ಬಗೆಯಲ್ಲೂ ವೈಚಿತ್ರ ವನ್ನು ನೋಡುತ್ತಾರೆ ಹರಿದಾಸರು.ಸುಂದರವಾಗಿ ಅಲಂಕರಿಸಿಕೊಂಡು ಕೃಷ್ಣ - ವೇಣುನಾದ ಮಾಡುತ್ತ ದನಗಳನ್ನು ಬಿಡಿರೆಂದು ಹೇಳುತ್ತ ಬಂದರೆ ಲೋಕವೇ ಬೆರಗಾಗುತ್ತಿತ್ತು. ಮೊದಲೇ ಅವನಲ್ಲಿ ಅನುರಕ್ತನಾದ ಗೋಪಿ ಯರು ಇದರಿಂದ ವಿಭ್ರಾಂತರಾಗುತ್ತಿದ್ದರು.

ತುರುಗಾಯ ಬಂದ ಗೋಪಿಯ ಕಂದ ಆನಂದದಿಂದ
ಸುರನರ ತರುಮೃಗ ಜಲಚರ ಮೋಹಿಸೆ
ತರಳೆರ ಮನ ಸೂರೆಯಾಗೆ ಕೊಳಲಿನಿಂದ



# ಕುಲಶೇಖರಾಳ್ವಾರ್

ಶ್ರೀಮತಿ.ಸಿ.ಎಸ್. ಊರ್ಮಿಳಾ

ಕುಲಶೇಖರಾಳ್ವಾರರು ಕೇರಳ ದೇಶದ 'ಕೋಳಿಕ್ಕೋಡು' ಎಂಬ ನಗರದಲ್ಲಿ ಜನಿಸಿದರು. ಇವರನ್ನು ಕೌಸ್ತುಭಾಂಶದವರೆಂದು (ಮಹಾವಿಷ್ಣುವಿನ ವಕ್ಷಸ್ಥಳದಲ್ಲಿರುವ ಹಾರದ ಮಧ್ಯೆ ಇರುವ ಕೌಸ್ತುಭಮಣಿ) ಇವರ ತಂದೆ ದೃಢವ್ರತ ಎಂಬ ರಾಜ. ಇವರು ಕಲಿಯುಗ 28 ನೇಯ ಸಂವತ್ಸರವಾದ ಪರಾಭವದಲ್ಲಿ ಕುಂಭಮಾಸ ಶುಕ್ಲಪಕ್ಷ ದ್ವಾದಶಿ ಗುರುವಾರ ಪುನರ್ವಸು ನಕ್ಷತ್ರದಲ್ಲಿ ಅವತರಿಸಿದರು. ಕುಲಶೇಖರರು ಸ್ವಯಂರಾಜನಾಗಿದ್ದರಿಂದ ಚೋಳ ಮತ್ತು ಪಾಂಡ್ಯ ರಾಜರನ್ನು ಸೋಲಿಸಿದನು. ಪಾಂಡ್ಯರಾಜನು ಕುಬೇರ ರಾಜ ಕುಲಶೇಖರ ಶೌರ್ಯವನ್ನು ಮೆಚ್ಚಿ ತನ್ನ ಮಗಳನ್ನೇ ಕೊಟ್ಟು ವಿವಾಹ ಮಾಡಿದನು.ಕುಲಶೇಖರನು ದಕ್ಷ ಆಡಳಿತಗಾರರಾಗಿ ಇದ್ದರು. ಇಷ್ಟಾದರೂ ಆಧ್ಯಾತ್ಮಿಕ ಜೀವನವನ್ನು ನಡೆಸುತ್ತಿದ್ದರು.

ರಾಜಕಾರ್ಯ ಮುಗಿದನಂತರ ಪ್ರತಿದಿನ ಅವರು ರಾಮಾಯಣದ ಪ್ರವಚನವನ್ನು ಕೇಳುತ್ತಾ ಸತ್ಸಂಗದಲ್ಲಿ ತಮ್ಮ ಕಾಲವನ್ನು ಸಾರ್ಥಕವಾಗಿ ಕಳೆಯುತ್ತಿದ್ದರು. ಒಮ್ಮೆ ಕುಲಶೇಖರರು ರಾಮಾಯಣದ ಖರಧೂಷಣರ ಯುದ್ಧದ ಪ್ರಸಂಗದ ಬಗ್ಗೆ ಪ್ರವಚನವನ್ನು ಕೇಳುತ್ತಿದ್ದರು. ಅದರಲ್ಲಿ ಶ್ರೀರಾಮ ಏಕಾಂಗಿಯಾಗಿ ಯುದ್ಧ ಮಾಡಿದನೆಂಬುದನ್ನು ಕೇಳಿದಾಗ ಅದರಿಂದ ಪ್ರಭಾವಿತರಾಗಿ ತಾವೇ ಯುದ್ಧ ಮಾಡಲು ಸಿದ್ಧರಾದಂತೆ ಆಭಾವಾವೇಶವನ್ನು ಅರಿತ ಭಾಗವತರು ಖರದೂಷಣರ ಮರಣ ವೃತ್ತಾಂತವನ್ನು ತಿಳಿಸಿದರು. ಆಗ ಕುಲಶೇಖರರ ಭಾವ ತೀವ್ರತೆ ಇಳಿಯಿತು.

ಒಮ್ಮೆ ಕುಲಶೇಖರರ ವಿಷ್ಣುಭಕ್ತರ ಮೇಲೆ ಅಸೂಯೆಗೊಂಡು ಅವರ ಮೇಲೆ ಕಳ್ಳತನದ ಆರೋಪವನ್ನು ಹೊರೆಸಿ ಅವರನ್ನು ರಾಜ್ಯದಿಂದ ಹೊರಗಟ್ಟಲು ಕೆಲವರು ಸಂಚು ಮಾಡಿದರು.ರಾಜರ ಪೂಜಾ

ನವರತ್ನ ಹಾರವನ್ನು ತೆಗೆದಿಟ್ಟು ಭಾಗವತರ ಮೇಲೆ ಸುಳ್ಳು ಆಪಾದೆಯನ್ನು ಮಾಡಿದರು. ಆಗ ಕುಲಶೇಖರರು ಘಟಸರ್ಪವೊಂದನ್ನು ತರಿಸಿ ಅದನ್ನು ಮಡಿಕೆಯಲ್ಲಿ ಇರಿಸಿದರು. ಅದನ್ನು ಸಭೆಯಲ್ಲಿರಿಸಿ ಎಲ್ಲರ ಮುಂದೆಯೂ ಭಾಗವತರು ಆಭರಣ ಕಳವು ಮಾಡುವವರಲ್ಲ ಅವರು ಹಾಗೆ ಮಾಡಿದ್ದ ಪಕ್ಷದಲ್ಲಿ ಈ ಮಡಿಕೆಯಲ್ಲಿನ ಘಟಸರ್ಪವು ನನ್ನನ್ನು ಕಚ್ಚಲಿ, ಇಲ್ಲವಾದರೆ ಏನೂ ಮಾಡದಿರಲಿ ಎನ್ನುತ್ತ ಮಡಕೆಯಲ್ಲಿ ಕೈ ಹಾಕಿದರು. ಸರ್ಪವು ಕುಲಶೇಖರರನ್ನು ಏನೂ ಮಾಡಲಿಲ್ಲ. ಮಂತ್ರಿಗಳು ಹೆದರಿ ತಮ್ಮ ತಪ್ಪನ್ನು ಒಪ್ಪಿಕೊಂಡರು. ತಮ್ಮನ್ನು ಕ್ಷಮಿಸಬೇಕೆಂದು ಪ್ರಾರ್ಥಿಸಿದರು.

ಇವರು ತಿರುಮಲೆಯ ಶ್ರೀನಿವಾಸನನ್ನು ಕುರಿತು ಸ್ವಾಮಿ ಭಾಗವತರು ದೇವತೆಗಳು ನಿಂತು ನಿನ್ನನ್ನು ಸಂದರ್ಶಿಸುವ ಮೆಟ್ಟಲಾಗಿರುವಂತೆ ಅನುಗ್ರಹಿಸು ಆಗ ನಿನ್ನ ಹವಳದಂತಿರುವ ಬಾಯನ್ನು ನೋಡುತ್ತಲೇ ಇರಬಹುದು ಎಂದು ಪ್ರಾರ್ಥಿಸಿದರು. ಅಂತೆಯೇ ಇಂದಿಗೂ ವಿಷ್ಣು ದೇವಾಲಯದ ಗರ್ಭಗುಡಿಯಲ್ಲಿರುವ ವಾಶಲ್ ಪಡಿಗೆ ಕುಲಶೇಖರನ್ ಪಡಿ - ಎಂದೇ ಕರೆಯುತ್ತಾರೆ. ಕುಲಶೇಖರರು 'ಪೆರುಮಾಳ್ ತಿರುಮೊಳಿ' ಎಂಬ 105 ಪಾಶುರಗಳ ತಮಿಳು ಪ್ರಬಂಧವನ್ನು ರಚಿಸಿದ್ದಾರೆ. ಅಷ್ಟೇ ಅಲ್ಲದೆ ಮುಕುಂದಮಾಲಾ ಎಂಬ ಅತ್ಯುತ್ತಮ ಸ್ತೋತ್ರವನ್ನು ರಚಿಸಿದ್ದಾರೆ. ಆಳ್ವಾರರುಗಳಲ್ಲಿ ಸಂಸ್ಕೃತದಲ್ಲಿ ಹಾಡಿರುವವರು ಇವರೊಬ್ಬರೇ ಮುಕುಂದ ಮಾಲಾದಲ್ಲಿ ನಲವತ್ತು ಶ್ಲೋಕಗಳಿವೆ.

ಕುಲಶೇಖರರ ಪೆರುಮಾಳ್ ತಿರುಮೊಳಿಯ ಒಂದು ಪಾಶುರ
ಶೆಡಿಯಾಯ ವಲ್ ವಿನೈಹಳ್ ತೀರ್ಕುಮ್ ತಿರುಮಾಲೇ।
ನೆದಿಯಾನೇ ವೇಂಗಡವಾ ನಿನ್ ಕೋಯಿಲಿನ್ ವಾಶಲ್ ॥
ಅಡಿಯಾರುಮ್ ವಾನವರುಮ್ ಅರಮ್ಬೈಯರುಮ್ ಕಿಡದ್ದಿಯೆಙ್ಗಮ್।
ಪಡಿಯಾಯ್ ಕಿಡನ್ದು ಉನ್ ಪವಳವಾಯ ಕಾಣ್ಬೇನೇ ॥

**ಮುಕುಂದ ಮಾಲಾದ ಒಂದು ಶ್ಲೋಕ**

ನಮಾಮಿ ನಾರಾಯಣ ಪಾದಪಂಕಜಂ
ಕರೋಮಿ ನಾರಾಯಣ ಪೂಜನಂ ಸದಾ ॥
ವಸಾಮಿ ನಾರಾಯಣ ನಾಮ ನಿರ್ಮಲಂ।
ಸ್ಮರಾಮಿ ನಾರಾಯಣ ತತ್ವಮವ್ಯಯಂ ॥

# ಕನಕದಾಸರು

-ಶ್ರೀಮತಿ. ಸುಧಾಮಧುಸೂದನ್

ಕನಕದಾಸರು ವ್ಯಾಸರಾಯರ ಶಿಷ್ಯರು. ಇವರು ಜಾತಿಯಿಂದ ಕುರುಬರು. ಧಾರವಾಡದ ಜಿಲ್ಲೆಯ ಬಾಡವೆಂಬ ಗ್ರಾಮದವರು. ಅನೇಕ ಗ್ರಾಮಗಳ ಢಣಾಯಕರು. ಇವರ ಹೆಸರು ಭೀರಪ್ಪ, ಇವರು ಬೇಟೆ, ಬಿಲ್ಲು ಬಿಡುವುದು.ಕತ್ತಿವರಸೆ,ಕಾಳಗಗಳಲ್ಲಿ ನುರಿತವರು. ನಿಧಿಯೊಂದು ಇವರಿಗೆ ದೊರಕಿದ್ದರಿಂದ ಇವರು ಕನಕನಾಯಕರಾದರು. ಇವರು ತಿರುಪತಿ ಯಾತ್ರೆಗೆ ಹೋಗಿ ಬರುವ ರೂಢಿ ಇತ್ತು. ಅಲ್ಲಿ ಉತ್ಸವಾದಿಗಳನ್ನು ನೋಡಿ, ಇವರು ತಮ್ಮೂರ ಹತ್ತಿರ ಕಾಗಿನೆಲೆಯಲ್ಲಿ ದೊಡ್ಡದೊಂದು ದೇವಸ್ಥಾನ ಕಟ್ಟಿಸಿ ಅಲ್ಲಿ ಕೇಶವ ದೇವರನ್ನು ಪ್ರತಿಷ್ಠೆಮಾಡಿಸಿ, ವಿಶೇಷ ಉತ್ಸವಾದಿಗಳ ವ್ಯವಸ್ಥೆ ಮಾಡಿದರು.ಇವರು ದೇವರ ಆಜ್ಞೆಯ ಮೇರೆಗೆ ಹರಿದಾಸರಾಗಿ, ಕನಕದಾಸರೆನಿಸಿದರು.ತಮ್ಮ ಐಶ್ವರ್ಯ ಆಡಂಭರಗಳೆಲ್ಲವನ್ನೂ ಬಿಟ್ಟು ಕಂಬಳಿಹೊದ್ದು ಕೈಯಲ್ಲಿ ಏಕತಾರೆಯನ್ನು ಹಿಡಿದು ವ್ಯಾಸರಾಯರಲ್ಲಿ ಹೋಗಿ ಮಾದ್ವಧೀಕ್ಷೆಯನ್ನು ಪಡೆದರು.ಇದಕ್ಕೆ ಮೊದಲು ಇವರು ಶ್ರೀ ವೈಷ್ಣವ ಪಂಥಾನುಯಾಯಿಗಳಿರಬಹುದು. ಇವರು ರಚಿಸಿರುವ ಮೋಹನ ತರಂಗಿಣಿಯಲ್ಲಿ ಆ ಮತದ ಅನೇಕ ಪ್ರಮೆಯಗಳಿರುವುದಲ್ಲದೆ, ಇವರು ಅದರಲ್ಲಿ ರಾಮಾನುಜಾಚಾರ್ಯರಿಗೆ ನಮಸ್ಕಾರ ಮಾಡಿರುತ್ತಾರೆ. ಇವರು ಆರಂಭದಿಂದಲೇ ಕನ್ನಡ ಪದಗಳನ್ನು ರಚಿಸುತ್ತಿದ್ದುದಾಗಿ ತೋರುವುದು,'ಬಾಡದಾದಿ ಕೇಶವ', ಕಾಗಿನೆಲೆಯಾದಿ ಕೇಶವ' ವೆಂಬ ಅಂಕಿತಗಳು ಇವರು ಪದಗಳಲ್ಲಿ ಕಾಣುವುವು,ವಿಜಯನಗರದಲ್ಲಿ ವ್ಯಾಸರಾಯರ ಸನ್ನಿಧಾನದಲ್ಲೇ ಇವರು ಬಹುಕಾಲ ಇದ್ದರು. ಆ ಸಂದರ್ಭದಲ್ಲಿ ಇವರು, ಪುರಂದರ ದಾಸರು ಮತ್ತು ವ್ಯಾಸರಾಯರು ಒಟ್ಟಿಗೆ ಸೇರಿ ಭಗವದ್ವಿಚಾರ ಚರ್ಚೆಮಾಡುತ್ತಿದ್ದರು.ಅನೇಕ ಸಂದರ್ಭಗಳಲ್ಲಿ ವ್ಯಾಸರಾಯರು ಇವರಿಗೆ ಕೊಡುತ್ತಿದ್ದ ಪುರಸ್ಕಾರವನ್ನು ನೋಡಿ ಸಹಿಸಲಾರದೆ ಮಠೀಯರು ಇವರ ಮೇಲೆ ಸ್ವಾಮಿಗಳ ಮುಂದೆ ದೂರು ಹೇಳುತ್ತಿದ್ದರು.ಆಗ ಕನಕ



ದಾಸರು ತೋರಿಸುತ್ತಿದ್ದ ಅನೇಕ ಅದ್ಭುತ ಚಮತ್ಕಾರಗಳನ್ನು ನೋಡಿದ ಮೇಲೆ ಅವರುಗಳು ಲಜ್ಜಿತರಾಗಿ ಸುಮ್ಮನಾದ ಪ್ರಸಂಗಗಳು ಈಗಲೂ ಪರಂಪರೆಯಲ್ಲಿ ರೂಢವಾಗಿವೆ. ಪುರಂದರದಾಸರು ಇದನ್ನು ಒಂದು ಪದವಾಗಿ ರಚಿಸಿರುವರು. ವಿಜಯನಗರದಿಂದ ಇವರು ಪ್ರತಿವರುಷವೂ ತಪ್ಪದಂತೆ ತಿರುಪತಿಗೆ ಯಾತ್ರೆ ಹೋಗುತ್ತಿದ್ದರು, ತಿರುಪತಿಯಲ್ಲಿ ದೇವರು ಇವರೊಡನೆ ಅನೇಕ ಅದ್ಭುತ ಲೀಲೆಗಳನ್ನು ನಡೆಸಿದ ಸಂದರ್ಭಗಳಿವೆ. ತಿರುಪತಿಯಲ್ಲದೆ ಇವರು ಅನೇಕ ದಕ್ಷಿಣ ಯಾತ್ರೆಗಳನ್ನು ಮಾಡಿಕೊಂಡು ಬೇಲೂರಿಗೆ ಬಂದು ಅಲ್ಲಿ ಅನೇಕ ದಿನ ವಾಸವಾಗಿದ್ದರು. ಬೇಲೂರಿನಲ್ಲಿ ವೈಕುಂಠದಾಸರಿಗೂ ಇವರಿಗೂ ವಿಶೇಷ ಮೈತ್ರಿಯೇರ್ಪಟ್ಟಿತು. ಅಲ್ಲಿಂದ ಕನಕದಾಸರು ಉಡುಪಿಗೆ ಹೋದರು. ಅಲ್ಲಿ ಸುಲಭವಾಗಿ ದೇವರ ದರ್ಶನವಾಗದಿದ್ದುದರಿಂದ ಇವರು ಹಿಂದಿನ ಕಿಟಕಿಯ ಹತ್ತಿರನಿಂತು ಮೊರೆಯಿಟ್ಟರು. ಆಗ ಶ್ರೀ ಕೃಷ್ಣಪ್ರತಿಮೆ ಇವರ ಕಡೆ ಮುಖ ತಿರುಗಿಸಿತು. ಅಂದಿನಿಂದ ಆ ಸಣ್ಣ ಕಿಟಕಿಗೆ "ಕನಕನ ಕಿಂಡಿ"ಯೆಂದೇ ಹೆಸರಾಯಿತು. ಉಡುಪಿಯಲ್ಲಿ ವಾದಿರಾಜರು ಇವರನ್ನು ಸನ್ಮಾನಿಸಿದರು. ಇವರುವಾದಿರಾಜರಲ್ಲೇ ಚಕ್ರಾಂಕನ ಮಾಡಿಸಿಕೊಂಡಂತೆ ತೋರುವುದು. ತಾವು ತ್ರಿವಿಕ್ರಮ ದಾಸರ (ವಾದಿರಾಜರ) ದಾಸರೆಂದು ಇವರು ಕೊಂಡಾಡಿದ್ದಾರೆ.

ಕನಕದಾಸರು ಬಿಡಿಯಾಗಿ ಸಾವಿರಾರು ಪದಗಳನ್ನು ಮಾಡಿರುವುದಲ್ಲದೆ ಮೋಹನತರಂಗಿಣೀ, ಹರಿಭಕ್ತಿಸಾರ, ನಳಚರಿತ್ರೆ, ನೃಸಿಂಹಸ್ತವ, ರಾಮಧ್ಯಾನ ಚರಿತ್ರೆ ಎಂಬ ಪ್ರಬಂಧಗಳನ್ನು ರಚಿಸಿರುವರು. ಕನಕದಾಸರ ಮಂಡಿಗೆಗಳೆಂಬವು ಪಂಡಿತರಿಂದಲೂ ಬಿಡಿಸಲಾರದ ಸಮಸ್ಯೆಗಳು, ಇವರ ಕೃತಿಗಳಲ್ಲಿ ಲಾಲಿತ್ಯ, ಶಬ್ಧಕ್ಕಿಂತಲೂ ಹೆಚ್ಚಾಗಿ ಅರ್ಥದ ಬಿಕ್ಕಟ್ಟು ಹೃದಯಕ್ಕೆ ನಾಟುವಂತಹ ಪದಗಳು, ನಿರ್ದಾಕ್ಷಿಣ್ಯ ಮಾತುಗಳು ಎದ್ದು ತೋರುವುವು, ಮಾರಿ ಮಸಣಿ ಮೊದಲಾದ ಕ್ಷುದ್ರ ದೇವತೆಗಳನ್ನೂ ಪೂಜಿಸುವ ಅಸಂಸ್ಕೃತರೂ ಶೂದ್ರರೂ ಆದವರ ಮನಸ್ಸಿನ ಮೇಲೆ ಪರಿಣಾಮ ಮಾಡುವಂತಹ ಅನೇಕ ಪದಗಳನ್ನು ರಚಿಸಿರುವರು. ಈ ಪದಗಳಲ್ಲಿನ ಶಬ್ದಗಳು ಆ ಜನರಲ್ಲಿ ನಿತ್ಯ ಬಳಕೆಯಲ್ಲಿರುವಂತಹವೇ. ಇವರು ಆ ಜನರಲ್ಲಿದ್ದ ಎಷ್ಟೋ ಅಂಧಾಚಾರಗಳನ್ನೂ ನಿಲ್ಲಿಸಿ ಅವರಲ್ಲಿ ಹರಿಭಕ್ತಿ ಮೂಡುವಂತೆ ಮಾಡಿದರು. ಇದೊಂದು ದೊಡ್ಡ ಸಮಾಜ ಸುಧಾರಣೆ ಎಂದೇ ಹೇಳಬೇಕು.

## ಚಿತ್ರಕಥೆ


# ಕುಮಾರಧಾರಾ ತೀರ್ಥ

ಕಥೆ:ತೆಲುಗು ಮೂಲ : ಡಿ.ಶ್ರೀನಿವಾಸ ದೀಕ್ಷಿತರು
ಅನುವಾದ : ಶ್ರೀಮತಿ
ಚಿತ್ರಗಳು : ಕೆ. ತುಳಸಿಪ್ರಸಾದ್

ಶ್ರೀ ವೇಂಕಟಾಚಲದ ಮೇಲೆ ಆಶ್ರಮವನ್ನು ನಿರ್ಮಿಸಿಕೊಂಡು ಅದರಲ್ಲಿ ಕುರುಡನಾದ ವೃದ್ಧ ಬ್ರಾಹ್ಮಣನೊಬ್ಬ ವಾಸಿಸುತ್ತಿದ್ದ. ಒಂದು ದಿನ ತನ್ನ ಮಗನಾದ ಕೌಂಡಿನ್ಯನೊಂದಿಗೆ ತಿರುಗುತ್ತಾ ಆಶ್ರಮದಿಂದ ಬಹಳಾ ದೂರ ಬಂದಿದ್ದಾನೆ.


"ಅಪ್ಪಾ ನೀನು ಬಹಳ ಆಯಾಸಗೊಂಡಿದ್ದೀಯೆ. ಈ ಮರದ ಕೆಳಗೆ ಸ್ವಲ್ಪ ಹೊತ್ತು ವಿರಮಿಸು. ನಾನೀಗಲೇ ಬಂದು ಬಿಡುತ್ತೇನೆ."

"ಹಾಗೆ ಆಗಲಿ ಮಗನೇ... ಬೇಗ ಬಂದು ಬಿಡು"





ಸ್ವಲ್ಪ ಹೊತ್ತು ನಿರೀಕ್ಷಿಸಿದ ನಂತರ ಆ ವೃದ್ಧ ಬ್ರಾಹ್ಮಣನು ಜೋರಾಗಿ ಕೂಗಲಾರಂಭಿಸಿದ್ದಾನೆ.


"ಮಗನೇ! ಕೌಂಡಿನ್ಯ! ಎಲ್ಲಿಗೆ ಹೋಗಿದ್ದೀಯೆ? ಕೂಡಲೇ ಬಾ ತಂದೆ! ಬಾ ಮಗೂ"





ಆ ವೃದ್ಧನ ಕೂಗನ್ನು ಕೇಳಿ ವೃದ್ಧನ ಬಳಿಗೆ ಬಂದಿದ್ದಾನೆ ಆ ಸ್ವಾಮಿ.

"ತಾತಾ! ಯಾರಿಗಾಗಿ ಹುಡುಕುತ್ತಿದ್ದೀಯೆ! ಅಕ್ಕಪಕ್ಕದಲ್ಲಿ ಯಾರು ಕಾಣುತ್ತಿಲ್ಲವಲ್ಲ"




ಯಾರೂ ಇಲ್ಲವಾ? ತಾವ್ಯಾರು?
ತಾತಾ ನನ್ನ - ನಿನ್ನ ಬಿಟ್ಟರೆ ಮತ್ತಾರೂ ಇಲ್ಲ
4
ನನ್ನ ಮಗನಿಗಾಗಿ ಹುಡುಕುತ್ತಿದ್ದೇನೆ. ನನಗೀಗ ಯಾರು ದಿಕ್ಕು?
ದಿಕ್ಕಿಲ್ಲ ದವರಿಗೇ ದೇವರೇ ದಿಕ್ಕು.
5
ತಾತಾ! ಕಾಲ ಮೇಲೆ ಕಾಲಿಟ್ಟು ನಡೆಯುವ ನಿನಗೆ ಇಷ್ಟು ಪುತ್ರ ವ್ಯಾಮೋಹ ತಕ್ಕುದಲ್ಲ. ಮುಕ್ತಿಗಾಗಿ ಕೋರು
6
ನನಗೆ ಮುಕ್ತಿ ಬೇಡ. ನನ್ನ ಕೋರಿಕೆ ಯನ್ನು ತೀರಿಸುವೆಯಾ? ನೀನು ಸ್ವಾಮಿಯೇ ಅಂದುಕೊಳ್ಳುತ್ತಿದ್ದೇನೆ!
7
ತಾತಾ! ಎಲ್ಲರೂ ಮುಕ್ತಿಬೇಕೆಂದು ಕೇಳಿಕೊಳ್ಳುತ್ತಾರೆ. ಆದರೆ ನೀನು ಮಾತ್ರ ಮುಕ್ತಿ ಬೇಡವೆನ್ನುತ್ತಿದ್ದೀಯಾ?
8
ನಾನು ನನ್ನ ಜೀವನ ಕಾಲದಲ್ಲಿ ದೇವ ಪಿತೃ ಕಾರ್ಯಗಳನ್ನು ಮಾಡಲಿಲ್ಲ. ಈಗ ಅವರ ಋಣವನ್ನು ತೀರಿಸಿಕೊಳ್ಳಬೇಕು. ಈಗ ಆ ಅವಕಾಶವನ್ನು ನೀಡು !
9


ಹಾಗಾದರೆ ನಾನು ಹೇಳಿದಂತೆ ಮಾಡು ತಾತಾ!
ಹಾಗೆ ಆಗಲಿ ಸ್ವಾಮಿ!
10
ಆ ವೃದ್ಧ ಬ್ರಾಹ್ಮಣನನ್ನು ನಿಧಾನವಾಗಿ ನಡೆಸಿಕೊಂಡು ಒಂದು ಜಲಧಾರೆಯ ಹತ್ತಿರ ಕರೆದುಕೊಂಡು ಹೋದರು ಸ್ವಾಮಿ.
11
ಹಾ ಗೆ ಆ ಗ ಲಿ ಸ್ವಾಮಿ
ತಾತಾ! ಈ ಜಲಧಾರೆಯ ಕೆಳಗೆ ಸ್ನಾನ ಮಾಡು
12
ಸ್ವಾಮಿಯ ಸಹಾಯದಿಂದ ಆ ವೃದ್ಧ ಬ್ರಾಹ್ಮಣನು ಆ ಜಲಧಾರೆಯ ಕೆಳಗೆ ಮಿಂದು ಸ್ನಾನವನ್ನು ಮಾಡಿದ್ದಾನೆ.
ಏನೀ ಅದ್ಭುತ? ಇಲ್ಲಿ ಸ್ನಾನ ಮಾಡುತ್ತಲೇ ನಾನು ನವ ತರುಣನಾಗಿ ಮಾರ್ಪಟ್ಟಿದ್ದೇನೆ"
13
Thulasi prasad


ಅಷ್ಟರವರೆಗೆ ಆ ವೃದ್ಧನ ಹಿಂದಿದ್ದ ಆ ಯುವಕನು
ನವಮೋಹನಾಕಾರನಾದ ಶ್ರೀ ವೇಂಕಟೇಶ್ವರನಾಗಿ ಪರಿವರ್ತಿತನಾಗಿದ್ದಾನೆ.
ಆತನಿಗೆ ದಿವ್ಯ ದರ್ಶನ ಭಾಗ್ಯ ದೊರೆತಿದೆ.
ತಾತಾ! ನೀನು ಮಾಡಬೇಕಾಗಿರುವ ಕರ್ಮಗಳನ್ನೆಲ್ಲಾ ಪೂರ್ತಿಗೊಳಿಸಿಕೋ. ಅದಕ್ಕೆ ದೊರಕಬಲ್ಲ ಸಂಪದಗಳನ್ನು ನಾನು ಅನುಗ್ರಹಿಸುತ್ತೇನೆ.
ಧನ್ಯನಾದೆ ಸ್ವಾಮಿ
14
ನೂರು ವರುಷದ ವೃದ್ಧ ನನ್ನು ಹದಿ ನಾರರ ತರುಣ ನನ್ನಾಗಿ ಮಾಡಿದ ಈ ಜಲಧಾರೆ ಕುಮಾರಧಾರಾ ತೀರ್ಥ ವೆಂದು ಪ್ರಸಿದ್ಧಿ ಪಡೆದಿದೆ.
ದೇವತೆ ಗಳೆಲ್ಲರೂ ಬಂದು ಪುಷ್ಪ ವೃಷ್ಟಿ ಸುರಿಸಿದ್ದಾರೆ...
15
ಬರುವ ಸಂಚಿಕೆಯಲ್ಲಿ... ಶ್ರೀ ವೇಂಕಟೇಶ್ವರನ ಮತ್ತೊಂದು ದಿವ್ಯ ಲೀಲಾವಿಲಾಸವನ್ನು ದರ್ಶಿಸಿ... ಪುನೀತರಾಗೋಣ..!
ಸ್ವಸ್ತಿ

# ದೇವರಿದ್ದಾನೆಯೇ?

- ಬಿ. ಆರ್. ಶ್ರೀಕಂಠಯ್ಯ

ಮಕ್ಕಳೇ, ಎಲ್ಲರಿಗೂ "ದೇವರಿದ್ದಾನೆಯೇ" ಎಂಬ ಪ್ರಶ್ನೆ ಬರುತ್ತದೆ. ದೇವರು, ನಾವು ಸಿನಿಮಾದಲ್ಲಿ ನೋಡಿದಂತೆ ತಕ್ಷಣ ನಮ್ಮ ಮುಂದೆ ಬಂದು ನಿಲ್ಲುವುದಿಲ್ಲ. ಅದಕ್ಕೆ ನಾವು ಕಾಯಬೇಕು ಮತ್ತು ಕಾಣಲು ಪ್ರಯತ್ನ ಪಡಬೇಕು. ದಿನವೂ ದೇವರ ಸ್ವರೂಪವನ್ನು ನಾವು ಕಾಣುತ್ತಿರುತ್ತೇವೆ. ನಮ್ಮ ಕಣ್ಣೆದುರಿಗೆ ಇರುವ ಸೂರ್ಯ ಮತ್ತು ಚಂದ್ರ ಪ್ರತ್ಯಕ್ಷದೈವ. ಅವರಿಲ್ಲದಿದ್ದರೆ ನಮಗೆ ಜೀವನವೇ ಇಲ್ಲ. ನಮಗೆ ಬೆಳಕುಕೊಡಲು ಬೆಳಗಿನ ವೇಳೆ ಸೂರ್ಯ ಮತ್ತು ರಾತ್ರಿಯ ಕಾಲದಲ್ಲಿ ಚಂದ್ರ ನಮಗೆ ಕಾಣುವ ದೇವರುಗಳು.ಇವರು ದಿನದ ೨೪ ಘಂಟೆಯೂ ದುಡಿಯುತ್ತಾರೆ. ಅವರಿಗೆ ರಜಾ ದಿನವೇ ಇಲ್ಲಾ. ಆದರೂ, ಅವರು ನಾವು ಬೆಳಕು ಕೊಡುತ್ತಿದ್ದೇವೆ ಎಂದು ಯಾವತ್ತು ಗರ್ವದ ಮಾತ ನಾಡಲಿಲ್ಲ.


ಇನ್ನು ಹಣ್ಣು ಎಂಬುವ ಪದ ಒಂದೇ ಆದರೂ, ವಿವಿಧ ಹಣ್ಣುಗಳ ರುಚಿ, ಆಕಾರ, ಬಣ್ಣಗಳು ಬೇರೆ ಬೇರೆ. ನಮಗೆ ಅಯಾಯಕಾಲದಲ್ಲಿ, ಒಳ್ಳೆಯ ಹಣ್ಣುಗಳು-ಮಾವು,ಕಿತ್ತಲೆ,ಸೇಬು,ದ್ರಾಕ್ಷಿ,ಹಲಸು ದೊರೆ ಯುತ್ತವೆ. ಹಾಗೆಯೇ ಕಾಯಿ ಇದ್ದಾಗ, ಒಗರು,ಹುಳಿ ಇರುತ್ತದೆ. ಹಣ್ಣಾದ ಮೇಲೆ ಅದರ ಮಧುರವಾದ ರುಚಿಯೇ ಬೇರೆ ನೀವೆಲ್ಲ ತಿಂದು ಸಂತೋಷಪಟ್ಟಿದ್ದೀರಾ ಅಲ್ಲವಾ? ಹೂವು ಎಂಬುವ ಪದ ಒಂದೇ, ಆದರೆ ಅದರ ವಾಸನೆ ಬಣ್ಣ, ಆಕಾರ ಇತ್ಯಾದಿ ಬೇರೆ ಬೇರೆ, ಸಂಪಿ ಗೆಯ ವಾಸನೆ, ಮಲ್ಲಿಗೆಯ ಸುವಾಸನೆ ಮತ್ತು ಇತರ ಹೂವುಗಳ ವಾಸನೆ ಬೇರೆ.ಮಗ್ಗಿನಲ್ಲಿರುವಾಗ ಒಂದು ಗಾತ್ರ, ಅರಳಿದ ಮೇಲೆ ಅದರ ಗಾತ್ರಗಳು ಬೇರೆ ಮತ್ತು ಬಣ್ಣವೇ ಬೇರೆ. ತೆಂಗಿನ ಮರ ಎತ್ತರದಲ್ಲಿದ್ದರೂ ಭೂಮಿಯಿಂದ ನೀರನ್ನು ಹೀರಿ, ನಮಗೆ ಶುದ್ಧವಾದ ಸಿಹಿಯಾದ

‘ಎಳನೀರು’ ಕೊಡುತ್ತದೆ. ಇದರ ಹಿಂದೆ ಇರುವ ಶಕ್ತಿ ಯಾವುದು, ಯೋಚನೆ ಮಾಡಿದ್ದಿರಾ ಮಕ್ಕಳೆ, ಅದೇ ಸೃಷ್ಟಿಯ ವೈಚಿತ್ರ್ಯ, ಅದರ ಹಿಂದೆ ದೈವದ ಕೈವಾಡವಿದೆ.

ನಾವೆಲ್ಲಾ ನೋಡಿದ್ದೇವೆ, ಈ ಪ್ರಪಂಚದಲ್ಲಿ ಲಕ್ಷಾಂತರ ಜೀವರಾಶಿಗಳಿವೆ. ತಮ್ಮ ರಕ್ಷಣೆಗಾಗಿ ಅದಕ್ಕೆ ಅದರದೇ ಆದ ರೂಪ, ಆಕಾರ, ಬಣ್ಣ, ಹಲ್ಲುಗಳು, ಅಂಗಾಗಳಿವೆ. ಅದರ ಕಂಠದಿಂದ ಬರುವ ಸುಮಧುರವಾದ ಗಾನ - ಕೋಗಿಲೆಯ ಕೂಗು, ನವಿಲನ ಗಾನ, ಆನೆಯ ಘೀಂಕಾರ, ಹುಲಿ - ಸಿಂಹಗಳ ಗರ್ಜನೆ, ಕಪ್ಪೆಯ ವಟ - ವಟ ಶಬ್ದ, ಜೇನು ನೊಣದ ಝೇಂಕಾರ ಎಲ್ಲರೂ ಕೇಳಿದ್ದೇವೆ. ಜೇನು ನೊಣವು, ವಿವಿಧ ಹೂವುಗಳಲ್ಲಿರುವ ಮಧುರ ರಸವನ್ನು ಹೀರಿ, ಅದು ನಮ್ಮಿಂದಲೇ ನಾಶವಾಗಿ ಮಧುರವಾದ ಜೇನು ತುಪ್ಪವನ್ನು ಕೊಡುತ್ತದೆ. ಇನ್ನು ಬೇಕಾದಷ್ಟು ನಾವು ನಮ್ಮ ಪರಿಸರದಲ್ಲಿ ನೋಡಿದ್ದೇವೆ ಮತ್ತು ಕೇಳಿದ್ದೇವೆ. ಗೋವುಗಳು ಹುಲ್ಲು ತಿಂದು ನಮಗೆ ರುಚಿಕರವಾದ ಹಾಲು ಕೊಡುತ್ತವೆ. ಆನೆ, ಹುಲಿ, ಸಿಂಹಗಳ, ಆಕಾರ ಅದರ ಶಕ್ತಿಯನ್ನು, ಪಕ್ಷಿಗಳು ದಿಗಂತದಲ್ಲಿ ಸಂಚರಿಸಲು ರೆಕ್ಕೆಗಳು, ಹಾವಿಗೆ ಅದರದೇ ಆದ ಆಕಾರ,ನವಿಲೆಗೆ ಚಿತ್ತಾರವಾದ ಗರಿಗಳು ಮತ್ತು ಅದು ಕುಣಿಯುವಾಗ ಗರಿಗಳನ್ನು ಬಿಡಿಸಿ ಕುಣಿಯುವುದನ್ನು ನಾವೆಲ್ಲರೂ ನೋಡಿದ್ದೀವಿ, ಯೋಚನೆ ಮಾಡಿದ್ದೀರಾ? ಇದು ಹೇಗೆ ಎಂಬುದಾಗಿ, ಅದೇ ಇದರ ಹಿಂದಿರುವ ದೈವ ಶಕ್ತಿ . ಇಂತಹ ದೈವ ಕೊಡುಗೆಯನ್ನು ನಾವೆಲ್ಲಾ ರಕ್ಷಿಸಿ, ಪ್ರಾಣಿಗಳಿಗೆ ಹಿಂಸೆ ಕೊಡದೆ ಅವುಗಳನ್ನು ನಾಶ ಮಾಡದೆ ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ.

ಮಕ್ಕಳೇ, ದೇವರಿದ್ದಾನೆಯೇ? ಎಂಬ ಪ್ರಶ್ನೆಗೆ, ಮೇಲಿನ ನಿದರ್ಶನಗಳನ್ನು ಓದಿದ ಮೇಲೆ ನಿಮಗೆ ಉತ್ತರ ಸಿಕ್ಕಿದೆಯಲ್ಲವೆ. ದೇವರಿದ್ದಾನೆ ಎಂದು ನಿಮಗೆ ಮನದಟ್ಟಾಯಿತಲ್ಲವೆ. ಅಂಥಹ ಪರಮಾತ್ಮನಿಗೆ ನಾವು “ಕೃತಜ್ಞತೆ (ತ್ಯಾಂಕ್ಸ್) ಸಲ್ಲಿಸೋಣ.

# ಪ್ರಜ್ಞಾವಂತ ಬಾಲಕಿ



**ಹೆಸರು :** ಎ. ಛಾರ್ಮಿತ ಸಿಂಹ

**ತರಗತಿ : -** 6 ನೇ ತರಗತಿ

**ಹುಟ್ಟಿದ ದಿನಾಂಕ :** 17.01.2010

**ತಂದೆಯ ಹೆಸರು :** ಶ್ರೀ ಎ. ನರಸಿಂಹಬಾಬು, ಜೂನಿಯರ್ ಅಕೌಂಟ್ಸ್ ಆಫೀಸರ್,
ಎ.ಪಿ.ಎಸ್.ಪಿ.ಡಿ.ಸಿ. ಎಲ್, ಪುತ್ತೂರು.

**ತಾಯಿಯ ಹೆಸರು :** ಶ್ರೀಮತಿ ಎ. ಸೀತಾಲಕ್ಷ್ಮೀ , ಸಹಾಯಕಾರ್ಯನಿರ್ವಹಣಾಧಿಕಾರಿಣಿ
ತಿ.ತಿ.ದೇ, ತಿರುಪತಿ.

**ಪಾಠಶಾಲೆಯ ಹೆಸರು :** ಸಿಲ್ವರ್ ಓಕ್ಸ್ ಸ್ಕೂಲ್, ಭವಾನಿನಗರ್, ತಿರುಪತಿ.

**ಸಾಧನೆ :** ಬಾಲಿಕಾ ಮೇಧಾವಿ (ಭರತನಾಟ್ಯ)

1. 6 ನೆಯ ತರಗತಿಯಲ್ಲಿ ಓದುತ್ತಿದ್ದೂ ಶೈಕ್ಷಣಿಕವಾಗಿ ಪಾಠಶಾಲೆಗೆ ಮೊದಲಿಗಳಾಗಿದ್ದಾಳೆ.
2. ಪ್ರಾಥಮಿಕ ತರಗತಿಗಳಲ್ಲಿ "ಹೆಡ್‌ಗರ್ಲ್" ಆಗಿದ್ದಾಳೆ.
3. ತನ್ನ ಗುರುಗಳಾದ ಕೇಶವಿ ಬಾಗೇದಲ್ಲಿ (ವಾಸವಿ ಕಳಾಕೇಂದ್ರ) ಅವರ ಬಳಿ "ಭರತ ನಾಟ್ಯ"ದಲ್ಲಿ ಶಿಕ್ಷಣವನ್ನು ಪಡೆದುಕೊಂಡು, ಭರತನಾಟ್ಯದಲ್ಲಿ ವಿಶೇಷ ಪ್ರತಿಭೆಯನ್ನು ಸಾರಿದ್ದಾಳೆ.
4. ತನ್ನ ಭರತನಾಟ್ಯ ಕೌಶಲ್ಯತೆಯಿಂದ 'ಬಾಲಿಕಾ ಮೇಧಾವಿ' ಎಂದು ಗುರುತಿಸಿಕೊಂಡಿದ್ದಾಳೆ.
5. ಇಲ್ಲಿಯವರೆಗೂ ಹಲವಾರು 'ಭರತ ನಾಟ್ಯ' ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸತತವಾಗಿ ಮೂರು ಬಾರಿ (2018 ,2019 ವರ್ಷಗಳಲ್ಲಿ ಹೈದರಾಬಾದ್, ಚೆನ್ನೈ, ಬೆಂಗಳೂರುಗಳಲ್ಲಿ ನಡೆದ ನಾಟ್ಯ ಕಾರ್ಯಕ್ರಮಗಳಲ್ಲಿ) 'ಗಿನ್ನಿಸ್ ಬುಕ್ ಆಫ್ ರಿಕಾರ್ಡ್ಸ್' ನಲ್ಲಿ ಹೆಸರನ್ನು ನಮೂದಿಸಿಕೊಂಡಿದ್ದಾಳೆ.

**ಅವಾರ್ಡ್‌ಗಳು :**

2019 - 'ಭಾರತೀಯ ನಾಟ್ಯ ಕಲಾಭಿನೇತ್ರಿ' , ಶ್ರೀ ಲಲಿತಕಲಾನೃತ್ಯ ನಿಕೇತನ್, ರಾಜ ಮಹೇಂದ್ರವರಂ,

2019 - 'ನಾಟ್ಯ ಸಂಕಲ್ಪ ಅವಾರ್ಡ್' ಶ್ರೀ ಗಣಪತಿ ನೃತ್ಯೋತ್ಸವ, ಕಾಣಿಪಾಕಂ,

2019- 'ಡೈನಮಿಕ್ ಟಾಲೆಂಟೆ ಅವಾರ್ಡ್ ' ಶಿಲ್ಪಾರಾಮಂ, ತಿರುಪತಿ.

2020 - 'ನಾಟ್ಯಶ್ರೀ ' ಅವಾರ್ಡ್, ಶಿಖರಮ್ ಆರ್ಟ್ ಥಿಯೇಟರ್ಸ್, ಹೈದರಾಬಾದ್.

# ಕ್ವಿಜ್

-ನಿರ್ವಹಣೆ ಶ್ರೀಮತಿ. ಸೂರ್ಯವಂಶಿ

1) ಕೃಷ್ಣನ ಶಂಖದ ಹೆಸರೇನು?

ಅ) ಪಾಂಚಜನ್ಯ ಆ) ಅನಂತ

ಇ) ಶಮಂತಕ ಈ) ಸುದರ್ಶನ

2) ಕೃಷ್ಣನು ಮೊಟ್ಟ ಮೊದಲು ಸಂಹಾರ ಮಾಡಿದ ರಾಕ್ಷಸಿ ಯಾರು?

ಅ) ತ್ರಿಜಟೆ ಆ) ಸಿಂಹಿಕಾ

ಇ) ಪೂತನಿ ಈ) ಶೂರ್ಪನಖಿ

3) ಕೃಷ್ಣನನ್ನು ಸಂಹರಿಸಲು ಬಂದ ಎತ್ತಿನ ಬಂಡಿಯ ರೂಪ ತಾಳಿದ ರಾಕ್ಷಸಿ ಯಾರು?

ಅ) ಬಕಾಸುರ ಆ) ವೃಷಭಾಸುರ

ಇ) ಶಕಟಾಸುರ ಈ) ಬಾಣಾಸುರ

4) ಕೃಷ್ಣನ ಸಹೋದರ ಯಾರು?

ಅ) ಬಲರಾಮ ಆ) ರಾಮ

ಇ) ಪರಶುರಾಮ ಈ) ಸುಧಾಮ

5) ಪರಶುರಾಮನ ನಂತರದ ಭಗವಂತನ ಅವತಾರ ಯಾವುದು?

ಅ) ಕೃಷ್ಣ ಆ) ಬುದ್ಧ

ಇ) ಕಲ್ಕಿ ಈ) ರಾಮ

6) ಪರಶುರಾಮನ ತಾಯಿಯ ಹೆಸರೇನು?

ಅ) ಅದಿತಿ ಆ) ಗಂಗೆ

ಇ) ರೇಣುಕಾದೇವಿ ಈ) ಕುಂತಿ

7) ಪರಶುರಾಮನ ಆಯುಧ ಯಾವುದು?

ಅ) ಗದೆ ಆ) ಖಡ್ಗ

ಇ) ಕೊಡಲಿ ಈ) ಸುದರ್ಶನ ಚಕ್ರ


• • • • • • • • • • • •

ಉತ್ತರಗಳು:

1) ಅ 2) ಇ 3) ಇ 4) ಅ 5) ಆ 6) ಇ 7) ಇ

# ಚಿತ್ರಲೇಖನ

ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......



ಮೇಲಿನ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...

| | | | | | |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| | | | | | |



ಬ್ರಹ್ಮೋತ್ಸವಗಳಲ್ಲಿ ಬಾಲಕರಿಂದ ಜಾನಪದ ನೃತ್ಯ





ಬ್ರಹ್ಮೋತ್ಸವದಲ್ಲಿ ಬಾಲಕಿಯರಿಂದ ಕೋಲಾಟದ ಕೋಲಾಹಲ

SAPTHAGIRI (KANNADA) ILLUSTRATED MONTHLY Published by Tirumala Tirupati Devasthanams printing on 30-08-2020. Regd. with the Registrar of Newspapers under "RNI" No.10742, Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020

